4735 (5548) ಶ್ರೀ ರಘುಪತಿ ಭಟ್ ಕೆ. (ಉಡುಪಿ) :– ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಅಧ್ಯಕ್ಷರ ಚುನಾವಣೆಯನ್ನು ಸರ್ಕಾರ ವಿಳಂಬಿಸುತ್ತಿರುವ ಕಾರಣವೇನು; ಯಾವಾಗ ನಡೆಸಲಾಗುವುದು;

ಆ) ಅಧ್ಯಕ್ಷರ ಚುನಾವಣೆಗೆ ಮೀಸಲಾತಿಯನ್ನು ಜಾರಿಗೆ ತರಲಾಗುವುದೇ;

ಇ) ಕೃಷಿ ಮಾರುಕಟ್ಟೆಯ ಚುನಾವಣೆ ಮುಗಿದು 15 ದಿನಗಳೊಳಗೆ ಅಧ್ಯಕ್ಷರ ಚುನಾವಣೆ ನಡೆಸಬೇಕೆಂಬ ನಿಯಮವಿದೆಯೇ; ನಾಮನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡುವಾಗ ಸರ್ಕಾರ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದೇ;

ಈ) ಕೃಷಿ ಮಾರುಕಟ್ಟೆಯ ಪುನಶ್ಚೇತನಕ್ಕೆ ಹಾಗೂ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ಒದಗಿಸುವುದು)

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :

ಅ) ನಾಮನಿರ್ದೇಶನ ಪ್ರಕ್ರಿಯೆ ಜಾರಿಯಲ್ಲಿದ್ದು, ಆ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಯನ್ನು ನಡೆಸಲು ಕ್ರಮ ಜರುಗಿಸಲಾಗುವುದು.

ಆ) ಪ್ರಸ್ತುತ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.

ಇ) ಇಲ್ಲ. ಹೌದು.

ಈ) ಬಹು ಹಂತದ ಶುಲ್ಕ ಆಕರಣೆ ಪದ್ಧತಿಯನ್ನು ಪರಿಷ್ಕರಿಸಿ ರಾಜ್ಯಾದ್ಯಂತ ಏಕ ಹಂತದ ಮಾರುಕಟ್ಟೆ ಶುಲ್ಕ ಆಕರಣೆ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

* ಕೃಷಿ ಮಾರಾಟ ಪದ್ಧತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಮಾದರಿ ಶಾಸನದಲ್ಲಿ ನೇರ ಮಾರಾಟ ಪದ್ಧತಿ, ಕಾಂಟ್ರಾಕ್ಟ್ ಫಾರ್ಮಿಂಗ್ ಮತ್ತು ಖಾಸಗಿ ಮಾರುಕಟ್ಟೆಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಇವುಗಳನ್ನು ಪ್ರಸ್ತುತ ಇರುವ ಮಾರುಕಟ್ಟೆ ಕಾಯ್ದೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಪೇಟೆ ಕಾರ್ಯಕರ್ತರು, ರೈತ ಪ್ರತಿನಿಧಿಗಳು ಹಾಗೂ ಈ ಕ್ಷೇತ್ರಕ್ಕೆ ಸಂಬಂಧಪಟ್ಟವರೊಂದಿಗೆ ಸಮಾಲೋಚನೆ ಪ್ರಕ್ರಿಯೆ ಜಾರಿಯಲ್ಲಿದ್ದು, ಅಗತ್ಯವೆನಿಸಿದಲ್ಲಿ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ಪರಿಶೀಲಿಸಲಾಗುವುದು.

* ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ರಾಜ್ಯದಲ್ಲಿನ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ಕೃಷಿ ಉತ್ಪನ್ನಗಳ ಆವಕ, ದೈನಂದಿನ ಧಾರಣೆಗಳ ಮಾಹಿತಿಯನ್ನು ಕೃಷಿ ಮಾರಾಟವಾಹಿನಿ ವೆಬ್‌ಸೈಟ್ ಮುಖಾಂತರ ದೊರೆಯುವಂತೆ ಮಾಡಲಾಗಿದೆ.

* ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಉತ್ಪನ್ನಗಳ ಟೆಂಡರ್ ಮಾರಾಟವನ್ನು ಇ–ಟೆಂಡರ್ ಪದ್ಧತಿಯಲ್ಲಿ ಜಾರಿಗೊಳಿಸುವ ಸಂಬಂಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇಲ್ಲಿ ಪ್ರಾಯೋಗಿಕವಾಗಿ ಎನ್.ಐ.ಸಿ ಸಂಸ್ಥೆ ಸಹಯೋಗದೊಂದಿಗೆ ಜಾರಿಗೊಳಿಸಲು ಕ್ರಮ ಜರುಗಿಸಲಾಗಿದೆ.

* ಕೃಷಿ ಉತ್ಪನ್ನಗಳ ಬೆಲೆ ಕುಸಿತ ಸಂದರ್ಭದಲ್ಲಿ ರೈತರಿಗೆ ಬೆಂಬಲ ಬೆಲೆ ನೀಡುವ ಮೂಲಕ ಕೃಷಿ ಉತ್ಪನ್ನಗಳ ಖರೀದಿಸಲು ಆವರ್ತನಿಧಿಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಆಕರಿಸುವ ಮಾರುಕಟ್ಟೆ ಶುಲ್ಕದ ಶೇ.0.5ರ ಮಾರುಕಟ್ಟೆ ಶುಲ್ಕವನ್ನು ಆವರ್ತನಿಧಿಗೆ ತುಂಬುತಿದ್ದು, ಇದರಿಂದಾಗಿ ಬೆಲೆ ಕುಸಿತ ಸಂಕಷ್ಟ ಪರಿಸ್ಥಿತಿಯಿಂದ ರೈತರನ್ನು ಪಾರು ಮಾಡಲು ವ್ಯವಸ್ಥೆಯನ್ನು ರೂಪಿಸಲಾಗಿದೆ.

4736 (5404) ಶ್ರೀ ಎನ್.ಎ. ರವೀಂದ್ರನಾಥ್ (ಮಾಯಕೊಂಡ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಗೆ (ನಿ) ದೊಡ್ಡಬಾತಿ ಇವರು 2005–06ನೇ ಸಾಲಿನಲ್ಲಿ ಕಬ್ಬು ಅರೆಯುವ ಹಂಗಾಮನ್ನು ಪ್ರಾರಂಭಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಇ) ಇಲ್ಲವಾದಲ್ಲಿ ಕಾರಣಗಳೇನು;

ಈ) ಇಂತಹ ಆಡಳಿತ ಮಂಡಳಿಯನ್ನು ಅಧಿಕಾರದಲ್ಲಿ ಮುಂದುವರೆಯಲು ಬಿಟ್ಟಿರುವುದು ಕಾರ್ಖಾನೆಯ ಹಿತಕ್ಕೆ ಧಕ್ಕೆ ತಂದಂತೆ ಆಗುವುದಿಲ್ಲವೇ?

ಉ) ಹಾಗಿದ್ದಲ್ಲಿ, ಮಂಡಳಿಯ ರದ್ಧತಿಗಾಗಿ ಕ್ರಮಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ, ಇವರು 2005–06ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಪ್ರಾರಂಭಿಸಿರುವುದಿಲ್ಲ.

ಆ) 2005–06ನೇ ಸಾಲಿನಲ್ಲಿ ಹಂಗಾಮು ಪ್ರಾರಂಭಿಸಲು ಆಡಳಿತ ಮಂಡಳಿ ತೀರ್ಮಾನಿಸಿರುವುದಿಲ್ಲ.

ಇ) ಕಾರ್ಖಾನೆಯು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ನಷ್ಟದಲ್ಲಿ ಮುಂದುವರೆದಿರುವ ಕಾರಣ ಮತ್ತು ಕಾರ್ಖಾನೆಯ ಟರ್‌ಬೈನ್ ಹಾಳಾಗಿರುವುದರಿಂದ ಕಬ್ಬು ಅರೆಯುವ ಹಂಗಾಮನ್ನು ಪ್ರಾರಂಭಿಸಿರುವುದಿಲ್ಲ.